ಬೆಂಗಳೂರಲ್ಲಿ ಮನೆಯಿಂದ ನಿತ್ಯ ಕಂಪೆನಿಯ ಸಮಯಕ್ಕೆ ಎಂದು ಹೋಗಿ ಸಾಯಂಕಾಲ ವಾಪಸಾಗುತ್ತಿದ್ದ ಮಹೇಶ ಕ್ರಮೇಣ ನಿಜಕ್ಕೂ ಸಣ್ಣ ಕೆಲಸವೊಂದಕ್ಕೆ ಸೇರಿದ್ದ. ಸಂಬಳ ಎಷ್ಟೇ ಇರಲಿ ಟೈಮ್ ಪಾಸಿಗಾದ್ರೂ ಇರಲಿ ಎಂದು. ತಿಂಗಳ ಖರ್ಚಿಗೆ ಊರಿಂದ ಅಪ್ಪಯ್ಯನೇ ಹಾಕುತ್ತಿದ್ದ.

ಆದರೆ ಇಂತಾ ಒಣ ಉಸಾಬರಿಯ ದರ್ಬಾರು ಎಷ್ಟು ದಿನ ನಡೆದೀತು? ಗಂಟು ಕರಗುವುದಿಲ್ವ? ತಾಯಿ ಸುವರ್ಣಕ್ಕನದ್ದೂ ಇರುವ ಒಬ್ಬನೇ ಮಗ ಮನೆಗೆ ಮರಳಲಿ ಎಂದು ಒಂದೇ ವರಾತ. ಭಾಗ್ಯಶ್ರೀ ಗರ್ಭಿಣಿಯಾಗಿ ತವರಿಗೆ ಹೆರಿಗೆಗೆಂದು ಹೋದೊಡನೆ ಮತ್ತೆ ಹಳ್ಳಿ ಮನೆಗೆ ರವಾನೆಯಾದ ಮಹೇಶ. ಬೆಂಗಳೂರಿನ ಫ್ಲ್ಯಾಟು ಮಾರಿದ ಹಣಕ್ಕೆ ಮೋಸವಿರಲಿಲ್ಲ... ಎಂತದಾದ್ರೂ ಶೋರೂಮು ಹಚ್ಚಿ ಯಲ್ಲಾಪುರ ಪೇಟೆಯಲ್ಲಿ ಜಂ ಎಂದಿರಬೇಕೆಂದಿದ್ದ ಮಹೇಶನ ಮಾತಿಗೆ ಬಿಲ್‌ಕುಲ್ ಒಪ್ಪದೇ ಮನೆಯ ಸಮೀಪವೇ ಇದ್ದ ಮತ್ತೊಂದು ಜಮೀನಿಗೆ ಆ ದುಡ್ಡು ಹಾಕಿ ಅಲ್ಲಿಗಲ್ಲಿಗೆ ಸಮಾ ಆಯ್ತು ಎಂದು ಸಮಾಧಾನ ಪಟ್ಟ ಲಕ್ಷ್ಮೀನಾರಾಯಣಪ್ಪ.

ಬಾಣಂತನ ಮುಗಿಸಿ ಮನಸ್ಸಿಲ್ಲದ ಮನಸ್ಸಿಂದ ಗಂಡನ ಮನೆಗೆ ಮರಳಿದ ಭಾಗ್ಯಶ್ರೀ ವಾರದಲ್ಲೇ ತವರಿಗೆ ವಾಪಸಾದಳು– ಘಟ್ಟದ ಮೇಲೆ ಶೀತ ಜಾಸ್ತಿ ಕೂಸಿಗೆ ಕೋವೆಯಾಯ್ತು ಎಂಬ ಹೆಳೆ ಹಿಡಿದು. 'ಹಳ್ಳಿ ಮನೆಯಾದ್ರೂ ಪೇಟೆಯ ಎಲ್ಲ ಸವಲತ್ತು ಹೊಂದಿರುವ ನಮ್ಮ ಮನೆಗೆ ಹೊಂದಿಕೊಳ್ಳಲು ಎಂತ ಕೊಮ್ಣೆ ನಿನ್ನ ಹೆಂಡ್ತಿಗೆ' ಎಂದು ಸುವರ್ಣಕ್ಕ ಮಗನ ಮುಂದೆ ಕಾರಿಕೊಂಡರೂ ಬೀಗರಿಗೆ ಫೋನಾಯಿಸಿ ಬೆಣ್ಣೆ ಹಚ್ಚಿ ಮಾತನಾಡಿದಳು. ಬೇರೆ ಕಂಪೆನಿಯಲ್ಲಿ ಕೆಲಸಕ್ಕೆ ಪ್ರಯತ್ನ ಮಾಡುತ್ತಿದ್ದಾನೆ – ಜಾಬ್ ಸಿಕ್ಕ ಕೂಡಲೇ ಮತ್ತೆ ಬೆಂಗಳೂರಿಗೆ ಹೋಗುತ್ತಾನೆ ಎಂದೆಲ್ಲ ಆಶೆ ತೋರಿಸಿದಳು.

ಅಂತೂ ಮತ್ತೆ ನಾಕಾರು ತಿಂಗಳ ಬಳಿಕ ಭಾಗ್ಯಶ್ರೀ ಪುಟ್ಟ ಅದಿತಿಯೊಂದಿಗೆ ಕಾನುಗೋಡಿನ ಆ ಮೂಲೆಮನೆಗೆ ಬಂದಳಾದರೂ ಮನೆಯ ಸೊಸೆ ಎಂಬುದಕ್ಕಿಂತ ನೆಂಟರಂತೆ ಇರತೊಡಗಿದಳು. ಮೆತ್ತಿಮೇಲಿನ ಕೋಣೆಯನ್ನು ತನ್ನಿಚ್ಛೆಯಂತೆ ತಯಾರು ಮಾಡಿಸಿಕೊಂಡು ಊಟ– ತಿಂಡಿಗೆ ಕರೆದಾಗಷ್ಟೇ ಹಾಜರಿ ಹಾಕುತ್ತ, ಮುಖ ಬಿಗಿದೇ ಇರತೊಡಗಿದಳು.

ಸುವರ್ಣಕ್ಕ ಕೆಲಸದಲ್ಲಿ ಹುಲಿ. ಎಂದಿಗೂ ಮನೆಗೆಲಸಕ್ಕೆಲ್ಲ ಜನ ಇಟ್ಟುಕೊಂಡವಳೇ ಅಲ್ಲ. ಮುಸುರೆ ಮಡಿ, ಶಾಸ್ತ್ರ– ಆಚಾರ ತೀರಾ ಹೆಚ್ಚೇ. ಇಡೀ ಮನೆಯ ಕೆಲಸ ಮುಗಿಸಿ ಕೊಟ್ಟಿಗೆ ಚಾಕ್ರಿ ಮಾಡಿ, ಆಳು ಕೈಕೊಟ್ಟ ಕಾಲಕ್ಕೆ ಅಡಿಕೆ ಹೆಕ್ಕಲೂ ಸೈ, ನಾಕು ಮಣ್ಣು ಮುಟ್ಟಿ ಹೊರಲೂ ಸೈ. ಯಾವ ಕೆಲಸಕ್ಕೂ ಕೈ ಹಾಕದೇ ಉಂಡ ಬಟ್ಟಲನ್ನೂ ಸಹಿತ ಪಾತ್ರೆ ತಿಕ್ಕುವಲ್ಲಿ ಒತ್ತಿಟ್ಟು, ಕೂಸಿನ ಹೇಲುಚ್ಚೆ ಬಟ್ಟೆಯನ್ನೂ ರಾಶಿ ಹಾಕಿಡುವ ಭಾಗ್ಯಶ್ರೀ ಅಸಹಕಾರ ಚಳವಳಿ ಹೂಡಿದಂತಿತ್ತು.

ಅನ್ನ ಬಡಿಸಿದ ಕೈಗೆ ನೀರು ಚಿಮುಕಿಸದೇ ಬೇರೆ ಪಾತ್ರೆ ಮುಟ್ಟುವಂತಿಲ್ಲ- ಮುಸುರೆಯಾಗುತ್ತದೆ ಎಂದು ಗೊತ್ತಿದ್ದರೂ ಬೇಕೆಂದೇ ಅತ್ತೆಯ ಶಾಸ್ತ್ರವನ್ನು ಭಂಗ ಮಾಡುವುದರಲ್ಲಿ ಏನೋ ಸಮಾಧಾನ ಅವಳಿಗೆ. ಎಲ್ಲ ಸೇರಿ ಅವಳಿಗೆ ಮಾಡಿದ ವಂಚನೆಗೆ ಪ್ರತೀಕಾರದ ಮಾತಾಡಲು ನಾಲಿಗೆ ಚುರುಚುರು ಎನ್ನುತ್ತದೆಯೋ ಎಂಬಂತೆ ವಡ್ಡ ವಡ್ಡ ಜವಾಬು ಒಗೆಯುತ್ತಿದ್ದಳು.

ಈ ನಡುವೆ ಮಹೇಶ, ಗೆಳೆಯನೊಂದಿಗೆ ಸೇರಿ ಯಲ್ಲಾಪುರದಲ್ಲಿ ಅಡಿಕೆ ವಖಾರಿ ಶುರು ಮಾಡಿದ್ದ. ಸಂಜೆ ಗೋಬಿಯನ್ನೋ ಮಿರ್ಚಿ ಬಜೆಯನ್ನೋ ಸವಿದು ಬರುವಾಗ ಭಾಗ್ಯಶ್ರೀಯ ಪಿರಿಪಿರಿ ಬೇಡವೆಂದು ಅವಳಿಗೂ ಏನಾರೂ ಕಟ್ಟಿಸಿಕೊಂಡು ಬರುತ್ತಿದ್ದ. ಅತ್ತೆ ಮಾವನಿಗೆ ಒಂದು ಚೂರೂ ರುಚಿ ನೋಡಲೂ ಬಿಡದಂತೆ ಸ್ವಾಹಾ ಮಾಡಿ ಬೇಸರ ತಣಿಸಿಕೊಳ್ಳುತ್ತಿದ್ದಳು ಭಾಗ್ಯಶ್ರೀ. ಮನೆಯಲ್ಲಿ ಸರಿಯಾಗಿ ನೆಟ್ ವರ್ಕ್ ಬಾರದ ಹೆಳೆ ಹಾಕಿ ಮನೆಯ ಹಿಂದಿನ ಗುಡ್ಡೆಯೇರಿ ಸಮಯದ ಪರಿವೆಯಿಲ್ಲದೇ ಮೊಬೈಲಿನಲ್ಲಿ ಮಾತನಾಡುತ್ತಿದ್ದಳು. ಪಕ್ಕದಲ್ಲಿ ಚೌಡಿಬನವಿರುವ ಖಬರಿಲ್ಲದಂತೆ ಮುಟ್ಟು ಮೈಲಿಗೆ ಆದಾಗಲೂ ಅಲ್ಲೆಲ್ಲ ತಿರುಗುವ ಸೊಸೆಯ ಕಾರುಬಾರು ತುಸುವೂ ಸರಿ ಎನ್ನಿಸುತ್ತಿರಲಿಲ್ಲ ಸುವರ್ಣಕ್ಕನಿಗೆ. ಬೆಳಗ್ಗೆಯೇ ಮಿಂದು ಎಲ್ಲೋ ಮದುವೆ ಮನೆಗೆ ಹೋಗುವವರ ಹಾಗೆ ತಯಾರಾಗಿ ಮುಖಕ್ಕೆ ಬಣ್ಣ ಬಳಿದುಕೊಳ್ಳುವ ಬದಲು ಸಾದಾ ವಸ್ತ್ರ ತೊಟ್ಟು ಮನೆಗೆಲಸದಲ್ಲಿ ಕೈ ಹಾಕಿದ್ರೆ ಆಗುವುದಿಲ್ವ ಎಂದು ತೋಟದ ಕೆಲಸಕ್ಕೆ ಬಂದವರೊಡನೆ ಗುಸುಗುಸು ಮಾಡುತ್ತಿದ್ದಳು. ಒಂದೆಡೆ ವಯಸ್ಸಾಗುತ್ತಿದ್ದ ಹಾಗೆ ಮೊದಲಿನಷ್ಟು ಶಕ್ತಿಯಿಲ್ಲ, ಜೊತೆಗೆ ಮನೆಯಲ್ಲಿ ಈಗ